ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಒಂದೂ ವಿಚಾರ, ನಾನು ಆಗಲೇ ಮಾತನಾಡುವಾಗ ಒಂದೂಕಾಲು ಕೋಟಿ ಬಾಡಿಗೆ ಬರುತ್ತದೆ ಎಂದು ಹೇಳಿದ್ದೆ, ಅದು ಒಂದೂ ಕಾಲು ಕೋಟಿಯಲ್ಲ, ಒಂದೂಕಾಲು ಲಕ್ಷ ಅವೇಲೆ ಇದರಲ್ಲಿ ಹಿಂದಕ್ಕೆ ತೆಗೆದುಕೊಳ್ಳುವಂಥ ವಿಚಾರದಲ್ಲಿ ನನಗೆ ತಿಳಿದುಬಂದ ಹಾಗೆ ಮೂಲತಃ ಅವರು ಸರ್ಕಾರದಿಂದ ನಾಮಕರಣಗೊಂಡ ಸದಸ್ಯರಾದರೂ ಹೈಕೋರ್ಟಿನಲ್ಲಿ ಆಕ್ಷೇಪ ಬಂದಾಗ ಆ ನಾಮಕರಣ ಸದಸ್ಯರ ಸದಸ್ಯತ್ವದ ಲೋಪವನ್ನು ನಿವಾರಿಸಿ ಕೊಳ್ಳಲಿಕ್ಕಾಗಿ ಅವರು ಇನ್ನೊಬ್ಬರಿಂದ ರಾಜೀನಾಮೆ ಕೊಡಿಸಿ ಅಲ್ಲಿಂದ ಎಲೆಕ್ಟೆಡ್ ಸದಸ್ಯರು ಕೊ-ಆಪ್ಟ್ ಮಾಡಿಕೊಂಡಿದ್ದಾರೆ. ಇದು ಮತ್ತೊಂದು ಅಕ್ರಮ ಅಕ್ರಮದ ಮೇಲೆ ನಡೆಯುವಂಥ ಮತ್ತೊಂದು ಅಕ್ರಮ ಕೂಡ ನಡೆದಿದೆ. ಇದನ್ನೂ ಪರಿಶೀಲನೆ ಮಾಡಿಸಿ.

ಶ್ರೀ ಸಿದ್ಧರಾಮಯ್ಯ.—ಮಾಡಿಸುತ್ತೇನೆ.

ಶ್ರೀ ವಟ್ಟಾರಿಗೌಡ ಎಸ್. ಪಾಟೀಲ್.—ಈಗ ಏನಾಗಿದೆಯೆಂದರೆ, ಮಾನ್ಯ ಮಂತ್ರಿಗಳಿಗೆ ಎಲ್ಲಾ ಗೊತ್ತಿದೆ, ಗೊತ್ತಿದ್ದರೂ ಅವರನ್ನು ತೆಗೆಯಲಿಕ್ಕೆ ಏಕೆ ಹಿಂದೇಟು ಹಾಕುತ್ತೀರಾ ಎಂದು ನಾನು ಪ್ರಶ್ನೆ ಕೇಳಿದೆ, ಎಷ್ಟು ದಿವಸದಲ್ಲಿ ಅವರನ್ನು ತೆಗೆಯುತ್ತೀರಿ. ಅವರ ನಾಮಕರಣವನ್ನು ಎಷ್ಟು ದಿವಸದಲ್ಲಿ ರದ್ದು ಮಾಡುತ್ತೀರಿ, ಅಲ್ಲಿಂದ ಅವರನ್ನು ಹೊರಗೆ ಹಾಕತಕ್ಕಂಥ ಕಾರ್ಯಕ್ರಮ ಯಾವಾಗ ಮಾಡುತ್ತೀರಿ, ಎಂದು ಕೇಳಿದ್ದಕ್ಕೆ ಉತ್ತರ ಕೊಡಲಿಲ್ಲ. ನೀವು ಹೇಳಬಹುದು ಸರ್ಕಾರ ಯಾವುದಕ್ಕೂ ಭಯ ಬೀಳುವುದಿಲ್ಲ ಎಂದು. ಆದರೆ ಕೃಷಿಕ ಸಮಾಜದಲ್ಲಿ ಯಾರು ಅಧ್ಯಕ್ಷರಾಗಿದ್ದಾರೆ ಅವರು ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ ಎನ್ನತಕ್ಕಂಥಾದ್ದರ ಬಗ್ಗೆ ಸಂಪೂರ್ಣವಾದ ವರದಿ ತಮ್ಮ ಕಡೆ ಬಂದಿದ್ದರೂ ಕೂಡ ಅವರನ್ನು ಅಲ್ಲಿ ಮುಂದುವರಿಸಿಕೊಂಡು ಹೋಗುವುದು ಯಾವ ಕಾರ್ಯಕ್ರಮ ಇದು.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೆ, ಅವರು ಕಾನೂನು ವಿರುದ್ಧವಾಗಿ ಕೆಲಸ ಮಾಡಿದ್ದಾರೆ ಎನ್ನತಕ್ಕಂಥ ವರದಿ ಸರ್ಕಾರಕ್ಕೆ ಬಂದಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಲ್ಲ, ಅವರ ಮೇಲೆ ಮಾಡಿರತಕ್ಕಂಥ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿದೆ. ಆ ಆರೋಪಗಳು ಸರಿಯೇ ಇಲ್ಲವೇ ಎಂದು ವಿಚಾರಣೆ ಮಾಡಿ ವರದಿ ಕೊಡಿ ಎಂದು ರಿಜಿಸ್ಟ್ರಾರ್‌ಗೆ ಹೇಳಿದ್ದೇವೆ. ಆ ವರದಿ ಬಂದ ತಕ್ಷಣ ಅವರ ಮೇಲೆ ಮಾಡಿರತಕ್ಕಂಥ ಎಲ್ಲಾ ಅಕ್ರಮಗಳನ್ನು ಪರಿಶೀಲನೆ ಮಾಡಿ ಸರ್ಕಾರ ಸೂಕ್ತವಾದಂಥ ನಿರ್ಧಾರ ಮಾಡಿ ನಿರ್ದಿಷ್ಟವಾದಂಥ ಕ್ರಮ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ಮತ್ತೊಮ್ಮೆ ಹೇಳಲಿಕ್ಕೆ ಬಯಸುತ್ತೇನೆ.

೭ ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ಬರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಕಾರ್ಮಿಕ ಮತ್ತು ನೌಕರರ ಬೇಡಿಕೆಗಳನ್ನು ಕಡೆಗಣಿಸಿ ಮಂಗಳೂರು ಕಾರ್ಮಿಕ ಆಯುಕ್ತರು ಸಂಧಾನದ ನೋಟೀಸ್ ಕೊಟ್ಟಿದ್ದರೂ ನಿಗಮದ ವ್ಯವಸ್ಥಾಪಕರು ವಿದೇಶ ಪ್ರವಾಸ ಹೋಗಿರುವ ಬಗ್ಗೆ—

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ಬರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಕಾರ್ಮಿಕ ಮತ್ತು ನೌಕರರ ಬೇಡಿಕೆಗಳನ್ನು ಕಡೆಗಣಿಸಿ, ಮಂಗಳೂರು ಕಾರ್ಮಿಕ ಆಯುಕ್ತರು ಸಂಧಾನದ ನೋಟೀಸು ಕೊಟ್ಟಿದ್ದರೂ ನಿಗಮದ ವ್ಯವಸ್ಥಾಪಕರು ವಿದೇಶ ಪ್ರವಾಸಕ್ಕೆ ಹೋಗಿರುವ ಬಗ್ಗೆ ಮಾನ್ಯ ಕೃಷಿ ಹಾಗೂ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೃಷಿ ಮತ್ತು ಅರಣ್ಯ ಸಚಿವರ ಪರವಾಗಿ ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮವು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ೪೪೫೩ ಹೆಕ್ಟೇರು ರಬ್ಬರ್ ತೋಟಗಳನ್ನು ಹೊಂದಿರುತ್ತದೆ. ಈ ರಬ್ಬರ್ ತೋಟ

ಗಳಲ್ಲಿ ಸಾಗೂ ರಬ್ಬರ್ ಸಂಸ್ಕರಣ ಘಟಕಗಳಲ್ಲಿ ೨೧೭೫ ಕಾರ್ಮಿಕರು ಖಾಯಂ ಆಗಿ ನೇಮಕ ಹೊಂದಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲದೆ, ಹಂಗಾಮಿ ಕಾರ್ಮಿಕರು ಹಾಗೂ ಖಾಯಂ ಸಿಬ್ಬಂದಿಯವರೂ ಇದ್ದಾರೆ. ಇವರೆಲ್ಲರನ್ನೊಳಗೊಂಡ ೫೫ ಕಾರ್ಮಿಕ ಸಂಘಗಳು ಹೆಚ್ಚಿನ ವೇತನ, ಭತ್ಯೆ ಮತ್ತು ಸವಲತ್ತು ಗಳನ್ನು ಕೇಳಿ ಬೇಡಿಕೆಯನ್ನು ಮಂಡಿಸಿದ್ದವು. ಇವುಗಳ ಪೈಕಿ ೩ ಕಾರ್ಮಿಕ ಸಂಘಗಳ ಸದಸ್ಯರು ಸಾಂಕೇತಿಕ ಮುಷ್ಕರವನ್ನು ೫-೯-೮೮ರಲ್ಲಿ ನಡೆಸಿದರು. ಕಾರ್ಮಿಕ ಸಂಘಗಳ ಬೇಡಿಕೆಗಳ ಬಗ್ಗೆ ಸಂಘ ಗಳ ಪ್ರತಿನಿಧಿಗಳೊಂದಿಗೆ ವಿಚಾರ ವಿನಿಮಯವನ್ನು ಪದೇ ಪದೇ ಈಗಾಗಲೇ ಮಾಡಿಕೊಳ್ಳಲಾಗಿದೆ.

ಮಂಖ್ಯೆ ಬೇಡಿಕೆಯಾದ ವೇತನ ಹಾಗೂ ಭತ್ಯೆ ಹೆಚ್ಚಳದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾ ದರೆ ರಾಜ್ಯ ಸರ್ಕಾರವು ಹೊಸ ಕನಿಷ್ಟ ವೇತನ ನಿಗದಿಗೊಳಿಸಿ ಪ್ರಕಟಣೆ ಹೊರಡಿಸಿದ ನಂತರ ವಿಚಾರ ಮಾಡಲಾಗುವುದು ಎಂದು ಕಾರ್ಮಿಕ ಸಂಘಗಳಿಗೆ ತಿಳಿಸಲಾಗಿತ್ತು. ರಾಜ್ಯ ಸರ್ಕಾರದ ಪ್ರಕಟಣೆ ಇನ್ನೂ ಹೊರ ಬಿದ್ದಿಲ್ಲ. ಆದರೆ ಕರಡು ನಿರ್ಣಯದಲ್ಲಿ ಸೂಚಿಸಲಾಗಿರುವ ವೇತನ ಹಾಗೂ ಭತ್ಯೆಗಳಿಗಿಂತ ಹೆಚ್ಚು ವೇತನ ಸಾಗೂ ಭತ್ಯೆಯನ್ನು ಈಗಾಗಲೇ ಅರಣ್ಯ ಅಭಿವೃದ್ಧಿ ನಿಗಮವು ಕೊಡುತ್ತಲಿದೆ. ೫-೯-೮೮ರಂದು ಸಾಂಕೇತಿಕ ಮುಷ್ಕರದಲ್ಲಿ ೧೫೫೫ ಕಾರ್ಮಿಕರು ಮಾತ್ರ ಭಾಗವಹಿಸಿದ್ದರು. ೩ ಕಾರ್ಮಿಕ ಸಂಘಗಳು ೧೨-೯-೮೮ರಂದು ಪುನ: ಒಂದು ನೋಟೀಸು ಕೊಟ್ಟು ೧೯-೯-೧೯೮೮ರಿಂದ ಅನಿರ್ದಿಷ್ಟ ಕಾಲ ಮುಷ್ಕರ ಹೂಡುವುದಾಗಿ ತಿಳಿಸಿದರು. ಈ ನೋಟೀಸು ತಾ ೯-೯-೮೮ರಲ್ಲಿ ತಯಾ ರಾಗಿದ್ದು ಇದು ೧೨-೯-೮೮ಕ್ಕೆ ನಿಗಮದ ಕಛೇರಿಗೆ ತಲುಪಿತು. ಈ ಮಧ್ಯೆ ಸಹಾಯಕ ಕಾರ್ಮಿಕ ಆಯುಕ್ತರು, ಮಂಗಳೂರು ಇವರು ಸಂಧಾನದ ನೋಟೀಸು ಕೊಟ್ಟು ಸಂಧಾನದ ಬಗ್ಗೆ (Conciliation Meeting) ೧೭-೯-೮೮ರಲ್ಲಿ ಸಭೆ ನಡೆಸಿದರು. ಆ ಸಭೆಯಲ್ಲಿ ಮಾತುಕತೆ ಪೂರ್ಣಗೊಳ್ಳದೆ ಯಾವ ತೀರ್ಮಾನಕ್ಕೂ ಬರದೆ ಸಭೆಯನ್ನು ಮುಂದೂಡಲಾಯಿತು. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮವು ಕಾರ್ಮಿಕರ ಬೇಡಿಕೆಗಳ ಬಗ್ಗೆ ತೆರೆದ ಮನಸ್ಸಿನಿಂದ ಇದೆ ಆದರೆ ಕಾರ್ಮಿಕರ ವೇತನ ಹೆಚ್ಚಳದ ಬೇಡಿಕೆಯನ್ನು ಪರಿಶೀಲಿಸುವಾಗ ರಬ್ಬರ್ ಉತ್ಪಾದನೆಯ ಹೆಚ್ಚಳದ ಬಗ್ಗೆಯಲ್ಲದೆ ರಬ್ಬರ್ ಶಾಖೆಯ ಹಣಕಾಸಿನ ಪರಿಸ್ಥಿತಿಯ ಬಗ್ಗೆಯೂ ಗಮನಿಸಬೇಕಾಗಿದೆ. ರಬ್ಬರ್ ಶಾಖೆಯ ಲೆಕ್ಕಪತ್ರದ ವರದಿ ಯಂತೆ ೧೯೮೭-೮೮ಕ್ಕೆ ಕೊನೆಯಾಗುವ ವರ್ಷದಲ್ಲಿ, ೬೬ ಲಕ್ಷ ರೂಪಾಯಿಗಳ ನಷ್ಟ ಶೇಷ ಬಾಕಿ (Carry over loss) ಇದೆ. ಈ ನಷ್ಟವನ್ನು ಕಾರ್ಮಿಕರ ಸಹಕಾರದಿಂದ ರಬ್ಬರ್ ಉತ್ಪಾದನೆ ಹೆಚ್ಚಿಸಿ, ೧೯೮೮-೮೯ನೇ ಸಾಲಿನಲ್ಲಿ ತೊಡೆದುಹಾಕುವ ನಂಬಿಕೆ ಇದೆ.

ನಿಗಮದ ನಿರ್ವಾಹಕ ನಿರ್ದೇಶಕರು ತಾ. ೧೦-೧೦-೮೮ರಂದು ವಿದೇಶ ಪ್ರವಾಸದಿಂದ ವಾಪಸ್ಸು ಬಂದಿರುವುದರಿಂದ ಕಾರ್ಮಿಕ ಸಂಘಗಳೊಡನೆ ಸಂಧಾನವನ್ನು ಮುಂದುವರಿಸಿ ಒಂದು ಇತ್ಯರ್ಥಕ್ಕೆ ಬರು ವುದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಅವರ ವಿದೇಶ ಪ್ರವಾಸವು, ಅರಣ್ಯ ಅಭಿವೃದ್ಧಿ ನಿಗಮದ ಪ್ರಗತಿದಾಯಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಹಾಯವಾಗಲಿರುವುದರಿಂದ ಅವರನ್ನು ಮಲೇ ಷಿಯಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ದೇಶಗಳಿಗೆ ೨ ವಾರಗಳ ಅಧ್ಯಯನ ಪ್ರವಾಸಕ್ಕೆ ಕಳುಹಿಸಿ ಕೂಡಲಾಗಿತ್ತು. ಅವರ ವಿದೇಶಿ ಪ್ರವಾಸದ ಕಾಲದಲ್ಲಿ ಮಲೇಷಿಯಾದಲ್ಲಿರುವ ಪ್ರಖ್ಯಾತ ರಬ್ಬರ್ ತೋಟಗಳ ನಿರ್ವಹಣೆಯ ರೀತಿಯ ಬಗ್ಗೆ ಮತ್ತು ರಬ್ಬರ್ ಸಂಸ್ಕರಣೆ ವಿಧಾನಗಳ ಬಗ್ಗೆ ಮತ್ತು ಆಸ್ಟ್ರೇಲಿಯಾ ದೇಶದ ಶೀಘ್ರ ಬೆಳೆಯುವ ಮರಗಳ ಬಗ್ಗೆ ಅಧ್ಯಯನ ನಡೆಸಿ ಅವುಗಳನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸುವುದರಿಂದ, ಅರಣ್ಯ ಅಭಿವೃದ್ಧಿ ನಿಗಮಕ್ಕೂ, ರಾಜ್ಯ ಸರ್ಕಾರಕ್ಕೂ ಉಪಯುಕ್ತ ವಾಗುವುದರಲ್ಲಿ ಸಂದೇಹವಿಲ್ಲ.

೧-೩೦ ಪಿ. ಎಂ.

ಶ್ರೀ ಕೆ. ಕುಶಾಲ.—ಸಂಧಾನ ಯಾವಾಗ ಮಾಡುತ್ತೀರಿ ?

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೆ, ಸಂಧಾನಗಳು ಅನೇಕ ಬಾರಿ ನಡೆದಿವೆ. ಕಾರ್ಮಿಕ ಆಯುಕ್ತರಂ ಇದರ ಬಗ್ಗೆ ಮಾತಂ ನಡೆಸಿದ್ದಾರೆ. ಅದು ಅಪೂರ್ಣವಾಗಿದೆ. ಕಾರ್ಯನಿರ್ವಾಹಕ ನಿರ್ದೇಶಕರು ಇರಲಿಲ್ಲ. ೧೦-೧೦-೮೮ಕ್ಕೆ ಅವರು ವಾಪಸ್ಸು ಬಂದಿದ್ದಾರೆ, ಕಾರ್ಮಿಕ ಸಂಘಗಳ ಜೊತೆ ಮಾತುಕತೆಯನ್ನು ಅತಿ ಶೀಘ್ರದಲ್ಲಿಯೇ ಮಾಡುತ್ತೇವೆ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಮಂತ್ರಿಗಳು ಸಂಧಾನವನ್ನು ಅನೇಕಸಾರಿ ನಡೆಸಿದ್ದೇವೆಂದು ಹೇಳಿದ್ದಾರೆ. ನಡೆಸಲಿಕ್ಕೆ ಪ್ರಯತ್ನ ನಡೆದಿದೆ. ಕಾರ್ಮಿಕ ಸಂಘಗಳ ಅಧ್ಯಕ್ಷರು ಮತ್ತು ಅಧಿಕಾರಿಗಳು ಸೇರಿ ಪ್ರಯತ್ನ ಮಾಡಿದ್ದಾರೆ. ಆದರೆ ತೀರ್ಮಾನ ಆಗಿಲ್ಲ. ಸಣ್ಣ ಮತ್ತು ಪುಟ್ಟಾರು ತಾಲ್ಲೂಕಿನಲ್ಲಿ ರಬ್ಬರ್ ಕೃಷಿಗೆ ಹೆಚ್ಚಿನ ಬೆಂಬಲ ರೂಪಿತವಾಗಿದ್ದರೆ, ಅದು ಕೆಲಸಗಾರರ ಮುಖಾಂತರ. ರಬ್ಬರ್ ಕೃಷಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಿಳಿಂವಳಿಕೆ ಇಲ್ಲದಂಥ ಸಂದರ್ಭದಲ್ಲಿ ಸಿಲೋನ್‌ನಿಂದ ಬಂದಂಥ ಜನರದ್ದು ಹೆಚ್ಚಿನ ಪಾತ್ರ ಇದೆ. ೬೬ಲಕ್ಷ ರೂಪಾಯಿನಷ್ಟ ವಿನಾಗಿದೆ, ಇದಂ ಕಾರ್ಮಿಕರಿಗೆ ಸವಲತ್ತು ಕೊಡುವುದಕ್ಕಾಗಿ ಆಗಿರುವ ನಷ್ಟವಲ್ಲ. ಕಳ್ಳಮಾರಾಟದಿಂದ, ಅಕ್ರಮ ವ್ಯವಹಾರಗಳಿಂದ ಆಗಿರುವಂತಾದ್ದು. ಇದನ್ನು ಮೊದಲು ನಿಯಂತ್ರಣ ಮಾಡಬೇಕು. ಆಡಳಿತದ ಲೋಪದೋಷದಿಂದ ನಷ್ಟವಾಗಿದೆ ನಷ್ಟವಾಗಿದೆಯೆಂದು ಹೇಳಿ, ಕಾರ್ಮಿಕರಿಗೆ ಕೊಡತಕ್ಕ ಸೌಲಭ್ಯಗಳಲ್ಲಿ ಕುಂಠಿತವಾಗಬಾರದು. ಕಾರ್ಮಿಕ ಮುಖಂಡರೊಂದಿಗೆ ಅಧಿಕಾರಿಗಳು ಸೇರಿ ರಾಜಿ ಪಂಚಾಯ್ತಿಯನ್ನು ಪೂರ್ತಿಗೊಳಿಸಿ, ಕಾರ್ಮಿಕರು ಮುಷ್ಕರದಲ್ಲಿ ತೊಡಗದಂತೆ ಅವಕಾಶ ಕಲ್ಪಿಸಿಕೊಡಬೇಕಂ, ಮುಷ್ಕರ ಮುಂದುವರಿದರೆ ವಂತ್ತಿ ನಷ್ಟ ಜಾಸ್ತಿಯಾಗುತ್ತದೆ. ಆದಕ್ಕೆ ಅವಕಾಶ ಕೊಡಕೂಡದೆಂದು ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಬಿ ಎ. ಉಮರಬ್ಬ (ವಿಠಲ್).—ಮಾನ್ಯ ಅಧ್ಯಕ್ಷರೆ, ಮಾನ್ಯ ಹಂಗಾಮಿ ಕಾರ್ಮಿಕ ಸಚಿವರು ಇಲ್ಲಿರುವ ಹಂಗಾಮಿ ವ್ಯವಸ್ಥೆಯ ಬಗ್ಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಹೊಸ ಕನಿಷ್ಟ ವೇತನ ನಿಗದಿಗೊಳಿಸಿ ಪ್ರಕಟಣೆ ಹೊರಡಿಸಿದನಂತರ ವಿಚಾರ ಮಾಡಲಾಗುವುದು ಎಂದು ಸಂಘಗಳಿಗೆ ತಿಳಿಸಲಾಯಿತು. ಅಂದರೆ ರಾಜ್ಯಸರ್ಕಾರದ ಪ್ರಕಟಣೆ ಇನ್ನೂ ಹೊರ ಬಿದ್ದಿಲ್ಲ. ಯಾವಾಗ ಹೊರಕ್ಕೆ ಬೀಳಬಹುದು ಒಂದು. ಇನ್ನು ಎರಡನೆಯದು ದಿ ಟೋನ್ ಆಫ್ ದಿ ರಿಪ್ಲೈ ಏನಿದೆ, ಇದು ಸ್ವಲ್ಪ ಫೇರ್ ಎಂದು ನನಗೆ ಅನ್ನಿಸುವುದಿಲ್ಲ. ದಿನಾಂಕ ೫-೯-೧೯೮೮ರಂದು ಸಾಂಕೇತಿಕ ಮುಷ್ಕರದಲ್ಲಿ ೧,೨೩೫ ಜನ ಕಾರ್ಮಿಕರು ಮಾತ್ರ ಭಾಗವಹಿಸಿದ್ದರು. ಇದರಲ್ಲಿ ಸ್ವಲ್ಪ ಏನೋ ಕಡಿಮೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಒಟ್ಟು ೨,೧೭೫ ಜನ ವರ್ಕರ್ಸ್‌ನಲ್ಲಿ ೧,೨೩೫ ಜನ ಭಾಗವಹಿಸಿದ್ದರೂ ಅಂದರೆ ಶೇಕಡ ೬೦ಕ್ಕಿಂತಲೂ ಹೆಚ್ಚು ಭಾಗವಹಿಸಿದ್ದರು ಎನ್ನುವುದು ಕಂಡುಬರುತ್ತದೆ. ಆದ್ದರಿಂದ, ಅಲ್ಲಿ ಆಷ್ಟು ಜನ ಪ್ರಸೆಂಟ್ ಇದ್ದುದು ಮಾತ್ರ ಅನ್ನುವುದು ಸರಿಯಲ್ಲ. ಒಂದು ಚಳುವಳಿ ಆದಾಗ ನಾನಾ ಕಾರಣಗಳಿಂದ, ಎಲ್ಲರೂ ಆ ಸ್ಥಳದಲ್ಲಿ ಜಮಾಯಿಸಲಿಕ್ಕೆ ಸಾಧ್ಯವಾಗದೇ ಇರಬಹುದು. ಈ ಬೇಡಿಕೆ ಏನಿದೆ, ಇದು ನೂರಕ್ಕೆ ನೂರರಷ್ಟು ಮಂದಿ ಕಾರ್ಮಿಕರು ಬಯಸುವಂಥ ಬೇಡಿಕೆ. ಒಟ್ಟು ೨,೧೭೫ ಜನರಿಗೂ ಈ ಬೇಡಿಕೆ ಈಡೇರಬೇಕೆಂಬ ಬಯಕೆ ಇದೆ. ಆದ್ದರಿಂದ ಇದನ್ನು ಹಗುರವಾಗಿ ತೆಗೆದುಕೊಳ್ಳುವುದು ಬೇಡ ಎಂದು ನಾನು ಭಾವಿಸುತ್ತೇನೆ. ಮೂರನೆಯದು ಅಂದರೆ ಇಂತಹ ಸಂಧಾನಗಳಂ ಎಷ್ಟು ತಡವಾಗುತ್ತವೋ, ಆಷ್ಟು ನಷ್ಟ ಜಾಸ್ತಿಯಾಗುತ್ತದೆ. ನಮ್ಮಲ್ಲಿರುವ ತೊಡಕು ಇಷ್ಟೆ, ನಾವು ಒಂದಂ ಕ್ಷೇತ್ರದಲ್ಲಿ ಪರಿಣಿತ ಹೊಂದಿದಂಥ ವ್ಯಕ್ತಿಗಳನ್ನು ಎಲ್ಲಾ ಕ್ಷೇತ್ರದಲ್ಲಿ ಆಡಳಿತ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ. ಇಲ್ಲಿ ವಿಪರ್ಯಾಸ ಏನು ಕಾಣುತ್ತಿದ್ದೇವೆ. ಅಂದರೆ ರಬ್ಬರ್ ತೋಟದ ಮ್ಯಾನೇಜಿಂಗ್ ಡೈರೆಕ್ಟರ್ ಮಲೇಷಿಯಾ, ಇಂಡೋನೇಷಿಯಾ ಇತ್ಯಾದಿ ಕಡೆ ವಿದೇಶಿ ಪ್ರವಾಸ ಮಾಡುವುದು, ರಬ್ಬರ್ ತೋಟ ಎಷ್ಟು ಚೆನ್ನಾಗಿ ಬೆಳೆಸಲಿಕ್ಕೆ ಸಾಧ್ಯವಾಗುತ್ತದೆ, ಲಾಭ ಮಾಡಲಿಕ್ಕೆ ಆಗುತ್ತದೆ ಎಂದು. ಆದೇ ವ್ಯಕ್ತಿ ಕಾರ್ಮಿಕರ ಸಂಧಾನಗಳನ್ನು ಮಾಡಿ ಅವರ ಸಮಸ್ಯೆಗಳನ್ನು ಬಗೆಹರಿಸುವಂಥ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಅವರು ಇನ್ನೊಂದು ಸಲ ಕಾರ್ಮಿಕರದು ಹೇಗೆ ನಡೆಸಲಿಕ್ಕೆ ಸಾಧ್ಯ ಅಂತ ಹೇಳಿ. ಹೆಚ್ಚು ಸವಲತ್ತು ಕೊಡುವಂಥ, ವ್ಯವಸ್ಥೆ ಮಾಡತಕ್ಕಂಥ ಜಪಾನ್, ರಷ್ಯಾಕ್ಕೆ ಹೋಗುವ ಪರಿಸ್ಥಿತಿ ಬರಬಹುದು. ಆದ್ದರಿಂದ, ಈ ಸ್ಥಳದಲ್ಲಿ ಕಾರ್ಮಿಕರ ವಿಚಾರಗಳನ್ನು ವಿಮರ್ಶೆಮಾಡಿ, ವ್ಯವಸ್ಥೆ ಮಾಡುವಂಥ ಒಬ್ಬ ಪ್ರತ್ಯೇಕ ಅಧಿಕಾರಿಯನ್ನು ನೇಮಕ ಮಾಡಿ ಇಟ್ಟುಕೊಳ್ಳುವುದು ಒಳ್ಳೆಯದು. ಯಾವಾಗ ಚಳುವಳಿ ಆಯಿತೋ. ಆಗ ಅವರು ವಿದೇಶಕ್ಕೆ ಹೋಗುತ್ತಾರೆ ಆದ್ದರಿಂದ, ಈ ಎರಡು ಸಾವಿರದ ಆಧಿಕ ಸಂಖ್ಯೆ ಕಾರ್ಮಿಕರ ಬೇಡಿಕೆಗಳು ಏನಿದೆ. ಇದು ಅತ್ಯಂತ ಅವಶ್ಯಕವಾದ ಬೇಡಿಕೆಗಳು ಎಂದು ಮನಗಂಡು ಎಂ.ಡಿ. ಯವರು ತಿಳಿಸಿದ್ದಾರೆ. ಆದ್ದರಿಂದ ಕೂಡಲೇ ಸಂಧಾನ ಕರೆದು ಮಾತನಾಡಿ ಅದಕ್ಕೆ ಒಂದು ಪರಿಹಾರ ಹುಡುಕಿ. ಮತ್ತೆ ಕೆಲಸ ಚೆನ್ನಾಗಿ ನಡೆಯಂ ಬೇಕು, ರಬ್ಬರ್ ತೋಟ ಚೆನ್ನಾಗಿ ನಡೆಯಂಬೇಕು ಹಾಗೆ ವ್ಯವಸ್ಥೆ ಮಾಡುವಂಥ ಒಂದಂ ನಿರ್ದಿಷ್ಟ ಉತ್ತರ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸೊರಕೆಯವರು ಹೇಳಿದಂಥ ವಿಚಾರ ಅಂದರೆ ಇಲ್ಲಿ ೬೬ ಲಕ್ಷ ರೂಪಾಯಿಗಳು ಏನು ನಷ್ಟವಾಗಿದೆ, ಅದು ಕಾರ್ಮಿಕರಿಂದ ಆಗಿಲ್ಲ ಎಂದು ಅವರು ಹೇಳಿದ್ದಾರೆ ನಾನೂ ಸಹ ಕಾರ್ಮಿಕರು ನಷ್ಟ ಮಾಡಿದ್ದಾರೆಂದು ಉತ್ತರದಲ್ಲಿ ಹೇಳಿಲಿಲ್ಲ. ಒಟ್ಟಾರೆ ಕಾರ್ಪೊರೇಷನ್‌ನಲ್ಲಿ ೬೬ ಲಕ್ಷ ರೂಪಾಯಿ ನಷ್ಟವಾಗಿದೆ. ಕ್ಯಾರಿ ಓವರ್ ಲಾಸ್ ಬಂದಿದೆ. ಅದಕ್ಕೋಸ್ಕರ ಹೆಚ್ಚು ಉತ್ಪನ್ನ ಮಾಡಬೇಕಾಗುತ್ತದೆ, ಇಲ್ಲಿ ವೇತನ ಭತ್ಯೆಗಳ ಬಗ್ಗೆ ಮುಷ್ಕರ ಮಾಡಿದ್ದಾರೆ. ಅಲ್ಲಿ ಕೆಲವರು ಮಾತ್ರ ಮಾಡಿದ್ದಾರೆ. ೧೨೩೫ ಜನರು ಮಾಡಿದ್ದಾರೆ ಎನ್ನತಕ್ಕದ್ದು, ಅಷ್ಟು ಜನ ಮಾತ್ರ ಎನ್ನತಕ್ಕದ್ದು ಅದು ಸರಿಯಾದ ಟೋನ್ ಅಲ್ಲ ಎಂದು ಶ್ರೀಮಾನ್ ಉಮರಬ್ಬ ಅವರು ಹೇಳಿದ್ದಾರೆ. ಇಲ್ಲಿ ೫ ಕಾರ್ಮಿಕ ಸಂಘಗಳಿವೆ.....

ಶ್ರೀ ಬಿ.ಎ. ಉಮರಬ್ಬ.—ನಿಮ್ಮ ಪಕ್ಷದ್ದೂ ಇದೆ.

ಶ್ರೀ ಸಿದ್ದರಾಮಯ್ಯ.—ನಮ್ಮ ಪಕ್ಷದ್ದಾಗಲಿ, ನಿಮ್ಮ ಪಕ್ಷದ್ದಾಗಲಿ, ನಾನು ಯಾವುದೇ ಪಕ್ಷದ ಬಗ್ಗೆಯೂ ಹೇಳಿಲಿಲ್ಲ. ಅಲ್ಲಿ ೫ ಕಾರ್ಮಿಕ ಸಂಘಗಳಿವೆ ಈ ೫ ಕಾರ್ಮಿಕ ಸಂಘಗಳ ಪೈಕಿ ಒಂದೊಂದು ಸಂಘವೂ ಒಂದೊಂದು ಸಾರಿ ಮುಷ್ಕರವನ್ನು ಮಾಡತಕ್ಕ ಕೆಲಸವನ್ನು ಮಾಡಿವೆ. ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಮತ್ತು ಕಾರ್ಮಿಕರ ಜೊತೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯದ ಮಾತೇ ಇಲ್ಲ, ಆದರೆ ಇಲ್ಲಿ ಅವರು ಕನ್ಸಲಿಯೇಷನ್ ಮೀಟಿಂಗ್ ಆಗಿ ಏನು ನೋಟಿಫಿಕೇಷನ್ ಆಗಿದೆ ಅದರಲ್ಲಿ ಏನು ನಮೂದು ಆಗಿದೆ ಅದಕ್ಕಿಂತಲೂ ಹೆಚ್ಚಿನ ವೇತನವನ್ನು ಕೊಡುತ್ತಿದ್ದೇವೆ. ಅದು ಏನೇ ಇರಲಿ ಈಗ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಊರಿಗೆ ಬಂದಿದ್ದಾರೆ. ಅವರ ಜೊತೆ ಮಾತನಾಡಬೇಕೆಂದು ನೀವು ಹೇಳುತ್ತಿದ್ದೀರಿ. ಕೂಡಲೇ ಅವರ ಜೊತೆ ಮಾತನಾಡಿ ಎಲ್ಲ ವಿಷಯಗಳನ್ನೂ ಸಮಗ್ರವಾಗಿ ಪರಿಶೀಲಿಸಿ ಆದಕ್ಕೆ ಒಂದು ಸೂಕ್ತ ಪರಿಹಾರವನ್ನು ಕಂಡುಹಿಡಿಯುವುದಾಗಿ ಒಂದು ಆಶಯವನ್ನು ವ್ಯಕ್ತಪಡಿಸುತ್ತೇನೆ. ಅವರು ವಿದೇಶಕ್ಕೆ ಏತಕ್ಕೆ ಹೋಗಿದ್ದರೆಂದರೆ ಆಲ್ಲಿ ಅಂದರೆ ಮಲೇಷ್ಯ, ನ್ಯೂಜಿಲೆಂಡ್‌ನಲ್ಲಿ ಬಹಳ ಬೇಗ ಬೆಳೆಯತಕ್ಕ ಮರಗಳ ತಳಗಳಿವೆ. ಮತ್ತು ಇದರ ಬಗ್ಗೆ ಹೊಸ ಹೊಸ ಸಂಶೋಧನೆಗಳನ್ನೂ ಕೂಡ ಅವರು ಮಾಡಿರುವುದರಿಂದ ಅದನ್ನೆಲ್ಲಾ ತಿಳಿದುಕೊಂಡು ಬರುವುದಕ್ಕಾಗಿ ಹೋಗಿದ್ದರು. ಆ ನೂತನ ಪದ್ಧತಿಗಳನ್ನು ನಮ್ಮಲ್ಲಿ ಅಳವಡಿಸಿಕೊಂಡರೆ ನಷ್ಟವಾಗಿರುವುದನ್ನು ಸರಿಪಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಮುಷ್ಕರ ಏನು ನಡೆಯುತ್ತಿದೆ ಈ ವಿಚಾರದಲ್ಲಿಯೂ ಕೂಡ ಪರಿಶೀಲನೆ ನಡೆಸಿ ಸೂಕ್ತ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡಲಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಪಟ್ಟಮಕ್ಕಿ ರತ್ನಾಕರ್.—೧೯ನೇ ತಾರೀಖಿನ ಮಂಷ್ಕರದ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಸಿದ್ದರಾಮಯ್ಯ.—ಇದರ ಬಗ್ಗೆ ತೀವ್ರ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ,

೮) ವರಾಹಿ ಜಲವಿದ್ಯುತ್ ಯೋಜನೆಯಿಂದಾಗಿ ಸಾವಿರಾರು ಎಕರೆ ಕಾಡು ನಾಶವಾಗಿದ್ದು ಈಗ ಮಾಲತಿ ಜಲಾಶಯ ಯೋಜನೆಯನ್ನು ಕಾರ್ಯಗತ ಮಾಡಿದರೆ ಇದರಿಂದಲೂ ಸಾವಿರಾರು ಎಕರೆ ಕಾಡು ನಾಶವಾಗುವುದರಿಂದ ಈ ಯೋಜನೆಯನ್ನು ಪ್ರಾರಂಭ ಮಾಡದಿರುವ ಬಗ್ಗೆ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಮಾನ್ಯ ಸಭಾಧ್ಯಕ್ಷರೆ, ವರಾಹಿ ಜಲ ವಿದ್ಯುತ್ ಯೋಜನೆಯಿಂದಾಗಿ ಸಾವಿರಾರು ಎಕರೆ ಕಾಡು ನಾಶವಾಗಿದ್ದು ಈಗ ಮಾಲತಿ ಜಲಾಶಯ ಯೋಜನೆಯನ್ನು ಕಾರ್ಯಗತ ಮಾಡಿದರೆ ಇದರಿಂದಲೂ ಸಾವಿರಾರು ಎಕರೆ ಕಾಡು ನಾಶವಾಗುವುದರಿಂದ ಈ ಯೋಜನೆಯನ್ನು ಪ್ರಾರಂಭ ಮಾಡದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.